ಶಾಸನ ರಚನಾ ಕಲಾಪಗಳು

೧೯೮೭ನೇ ಇಸವಿಯ ಕೈಗಾರಿಕಾ ವಿವಾದಗಳ (ಕರ್ನಾಟಕ, ತಿದ್ದುಪಡಿ ವಿಧೇಯಕ)

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಕೆ. ಕಾಂತಾ (ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕದ ಮಂಡನೆಗೆ ಅನುಮತಿ ನೀಡಲಾಯಿತು

ಶ್ರೀ ಎಸ್.ಕೆ. ಕಾಂತಾ.—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

* Annexure

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ

ಶ್ರೀ ಎಂ. ಎಸ್. ಕೃಷ್ಣನ್.—ಪರಿಶೀಲನೆಗಾಗಿ ಇರುವ ಬಿಲ್‌ಗಳನ್ನು ಆಮೇಲೆ ತೆಗೆದು ಕೊಳ್ಳೋಣ. ನಿನ್ನೆ ದಿನ, ಮೊನ್ನೆದಿನದಿಂದ ನಮ್ಮ ವಿಚಾರ ಚರ್ಚೆಗೆ ಬಂದಿಲ್ಲ, ಎರಡು ದಿವಸ ಆಗಿದೆ. ಮಾನ್ಯ ಪಂಪಾಪತಿಯವರು ದಾವಣಗೆರೆಯಲ್ಲಿ ಹಂಗರ್ ಸ್ಟ್ರೈಕ್ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಆಮೇಲೆ ಚರ್ಚೆಗೆ ತೆಗೆದುಕೊಳ್ಳೋಣ. ಮೊದಲು ಒಂದು ಗಂಟೆಕಾಲ ಬಿಲ್ಸ್ ಆಗಲಿ. ಮೂರು ಗಂಟೆಯವರೆಗೆ ಬಿಲ್ಸ್ ತೆಗೆದುಕೊಂಡು ಅದನ್ನು ಮುಗಿಸಿದ ಮೇಲೆ ಬೇರೆ ವಿಚಾರ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಹಾಗೇ ಆಗಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಆಗಲಿ

ಅಧ್ಯಕ್ಷರು.—ನೀವು ಎಲ್ಲಾ ಸಹಕಾರ ಕೊಡುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಸಹಕಾರ ಕೊಡುತ್ತಿದ್ದೇವೆ. ಆದರೆ ನೀವು ನಮ್ಮ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶ ಕೊಡುವುದಿಲ್ಲವಲ್ಲ.

೧೯೮೭ನೇ ಇಸವಿಯ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ. ಬಿ. ಇನಾಮದಾರ್ (ಅಬಕಾರಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವನ್ನು ಮಂಡಿಸಲಾಗಿದೆ.

SRI D. B. INAMDAR.—The policy of the Government is to supply arrack in sealed bottles. The contractors should be the holders of distillery licence under Section 16. This has been done keeping in view various judgements given by various courts and also the experience of the Government, wherein interim arrangments have been made. The arrangement is holding good. with this view this legislation has been brought.